P. W. D. Roads in Indi Taluk

453 SRI S. S. ARAKERI (Balloli).—Will the Chief Minister be pleased to state.—

(a) the number of roads taken under P.W.D. in Indi Taluk and their names since the last three years ;

(b) whether the road from Indi to Jigajeevani *via* Hanjagi Babalad, Hulagunka, Sonakanahalli, Hadalaganga and Satalagaon has been taken over by the P.W.D.

(c) if not the reasons and when it will be taken under P. W. D., and the total estimated expenditure required for this ;

whether the road from Kennur to Chadchan *via* Inchargeri and Jigajeevani taken over by P.W.D.

SRI R. GUNDU RAO (Chief Minister).—

(a) 3 (Three) Roads.

Their names are as follows :

(i) Nandargi approach road	...	4.00 Kms.
(ii) Chikkamannur to join Shiradon Lingasur road near Zalki *via* Lachayan	...	33.50 Kms.
(iii) Chick Bevanur to Indi road	...	5.00 Kms.

(b) (i) Indi to Jigajeevan road via Babalad, Hulagunka, Sonakenhalli, Hadalaganga and Satalgaon comprises of two sections viz:

(i) Indi to Horti Road	...	18.00 Kms.

(ii) Halagunki cross to Jigajeevan 14.80 Kms. is under construction under I.C.R.C. Programme. Indi Hanjagi road is altogether a diffierent road under construction under I.C.R.C. Programme.

(c) The two roads under construction under I.C.R,C. Programme viz :

(i) Halagunki cross to Jigajeevan ; and

(ii) Indi-Hangagi will be maintained by the P.W.D. after all the 3 phases of construction are completed.

The estimated cost required for construction of culverts (C. D. works) is about Rs. 2.00 lakhs.

(d) This is a P. W. D. Road.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ನಾನು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಸರಿಯಾದ ಮಾಹಿತಿಯನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕೊಡಲಿಲ್ಲವೆಂದು ನನಗನ್ನಿಸುತ್ತಿದೆ. ಅದರಲ್ಲಿ, ಊರುಗಳ ಹೆಸರುಗಳನ್ನು ಏನು ಕೊಟ್ಟಿದ್ದಾರೆ ಅವು ಒಂದಕ್ಕೊಂದು ಸಂಬಂಧವಿಲ್ಲದಂತಾಗಿವೆ. ಆಪರು ಊರು

ಗಳ ಹೆಸರನ್ನು ಲಾಚ್‌ಯಾನ್, ಜಾಲ್ಕಿ, ಹದಲಗಂಗಾ ಎಂದು ಕೊಟ್ಟಿದ್ದಾರೆ. ಅದು ಲಜಿಯಾಣ, ಜಳಕಿ ಹೆಡಲಗಂಗ ಎಂದು ಇರಬೇಕಿತ್ತು. ಈ ಬಗ್ಗೆ ನಮ್ಮನ್ನಾದರೂ ಕೇಳಿದ್ದರೆ ಆ ಊರುಗಳು ಯಾವುವು ಎಂಬುದನ್ನು ಸರಿಯಾಗಿ ಹೇಳುತ್ತಿದ್ದೆವು. ಕನ್ನಡದಲ್ಲಿ ಇಷ್ಟು ತಪ್ಪು ತಪ್ಪಾಗಿ ಊರುಗಳ ಹೆಸರುಗಳನ್ನು ಕೊಡುವುದು ತುಂಬಾ ಅವಮಾನಕರ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅವರು ಪ್ರಶ್ನೆ ಕೇಳಿರುವುದು ಇಂಗ್ಲೀಷ್‌ನಲ್ಲಿದೆಯೋ ಅಥವಾ ಕನ್ನಡದಲ್ಲಿದೆಯೋ ಎಂಬುದನ್ನು ನೋಡಿದರೆ, ತಪ್ಪು ಎಲ್ಲಿ ಆಗಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ಇಂಗ್ಲೀಷ್‌ನಲ್ಲಿ ಕೊಟ್ಟಿರತಕ್ಕಂಥ ಊರುಗಳ ಹೆಸರುಗಳು ಸರಿ ಇದೆ. ಆದರೆ ಕನ್ನಡದಲ್ಲಿ ಕೊಟ್ಟಿರತಕ್ಕಂಥ ಊರುಗಳ ಹೆಸರುಗಳು ಬಹಳ ಅವಮಾನಕರವಾದ ರೀತಿಯಲ್ಲಿ ಇದೆ.

ಅಧ್ಯಕ್ಷರು.—ಇನ್ನು ಮುಂದೆ ಅದನ್ನು ಸರಿಪಡಿಸಂವುದಕ್ಕೆ ವ್ಯವಸ್ಥೆ ಮಾಡೋಣ. ಈಗ ನೀವು ಪ್ರಶ್ನೆ ಕೇಳಿ.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ನಂದರ್ಗಿ ಕೂಡು ಮಾರ್ಗದಲ್ಲಿ ೪ ಕಿಲೋ ಮೀಟರ್ ಮತ್ತು ಲಚಿಯಾಣ ಮಾರ್ಗವಾಗಿ ಜಳಕಿ ಬಳಿಯ ಚಿಕ್ಕ ಮನ್ನೂರಿನಿಂದ ಶಿರಡನ್‌ಗೆ ಸೇರುವ ಲಿಂಗಸೂರು ರಸ್ತೆಯಲ್ಲಿ ೩೩.೫೦ ಕಿಲೋಮೀಟರ್ ಮತ್ತು ಚಿಕ್ಕ ಬೇವನೂರಿನಿಂದ ಇಂಡಿಗೆ ಹೋಗುವ ರಸ್ತೆಯಲ್ಲಿ ೫ ಕಿಲೋ ಮೀಟರ್‌ನಷ್ಟು ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ಯವರು ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ. ಸುಮಾರು ೭–೮ ವರ್ಷಗಳಿಂದಲೂ ಪಿ.ಡಬ್ಲ್ಯೂ.ಡಿ. ಯವರು ಅದನ್ನೆಲ್ಲಾ ತೆಗೆದುಕೊಂಡು ಮಾಡುತ್ತಿದ್ದಾರೆ. ಆದರೆ ಕಳೆದ ೩ ವರ್ಷಗಳಲ್ಲಿ ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ರಸ್ತೆಗಳನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಆರ್. ಗುಂಡೂರಾವ್. —ನೀವು ನಿಮ್ಮ ಪ್ರಶ್ನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ರಸ್ತೆಗಳನ್ನು ಅವರು ತೆಗೆದುಕೊಂಡಿದ್ದಾರೆ ಎಂದು ಸ್ಪಷ್ಟವಾಗಿ ಕೇಳಿದ್ದೀರಿ. ಅದಕ್ಕೆ ನಂದರ್ಗಿಯಲ್ಲಿ ೪ ಕಿಲೋ ಮೀಟರ್ ಮತ್ತು ಲಚಿಯಾಣ ಮಾರ್ಗವಾಗಿ ಜಳಕಿ ಬಳಿಯ ಚಿಕ್ಕಮನ್ನೂರಿನಿಂದ ಶಿರಡನ್‌ಗೆ ಸೇರುವ ಲಿಂಗಸೂರು ರಸ್ತೆಯಲ್ಲಿ ೩೩.೫೦ ಕಿಲೋ ಮೀಟರುಗಳು ಮತ್ತು ಜೆಗಜೀವನ–ಇಂಡಿ ರಸ್ತೆಯಲ್ಲಿ ೦.೨.೮೦ ಕಿಲೋ ಮೀಟರ್‌ನಷ್ಟು ರಸ್ತೆಗಳನ್ನು ಅವರು ತೆಗೆದುಕೊಂಡಿದ್ದಾರೆಂದು ಸರಿಯಾಗಿ ಹೇಳಿದೆ.

ಶ್ರೀ ಎಸ್.ಎಸ್. ಆರಕೇರಿ.—ಸ್ವಾಮಿ, ಈ ಶಿರಡನ್ ಮತ್ತು ಜಳಕಿ ಸರ್ಕಲ್‌ನಲ್ಲಿ ೧೦ ವರ್ಷಗಳ ಹಿಂದೆ ಆ ಕೆಲಸ ಆಗಿದೆ. ಆದರೆ ಈಗ, ಎಷ್ಟು ಕೆಲಸ ಆಗಿದೆ ಎಂಬ ಬಗ್ಗೆ ನನಗೆ ಲೇಟೆಸ್ಟ್ ಇನ್‌ಫರ್ ಮೇಷನ್ ಬೇಕಿತ್ತು. ಹಲಗುಂಕಿ ಕ್ರಾಸ್‌ನಿಂದ ಜೆಗಜೀವನಕ್ಕೆ ಹೋಗುವ ರಸ್ತೆ ಬಹಳ ಮಹತ್ವದ ರಸ್ತೆಯಾಗಿದೆ. ಐ.ಸಿ.ಆರ್.ಸಿ. ಪ್ರೋಗ್ರಾಂನಲ್ಲಿ ಇದನ್ನು ಅವರು ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ ಈ ರಸ್ತೆ ಬಹಳ ಮಹತ್ವದ ರಸ್ತೆಯಾಗಿದ್ದರೂ ಸಹ ಐ ಸಿ. ಆರ್. ಸಿ. ಕಾರ್ಯಕ್ರಮದ ಪ್ರಕಾರ ಕೂಡ ರಸ್ತೆ ರಿಪೇರಿ ಕೆಲಸ ಆಗಲಿಲ್ಲ. ಅಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ರಸ್ತೆ ಮೇಲೆ ಹಾಕಿದ್ದಾರೆ. ಇದರಿಂದಾಗಿ ಚಕ್ಕಡಿಗಳು, ಕಾರುಗಳು ಅಲ್ಲಿ ಹೋಗುವುದಕ್ಕಾಗುವುದಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ಆ ರಸ್ತೆಯ ಕೆಲಸವನ್ನು ಆದಷ್ಟುಬೇಗ ಮಾಡಿಸಿಕೊಡುತ್ತೀರಾ? ಮತ್ತು ಐ.ಸಿ.ಆರ್.ಸಿ. ಪ್ರೋಗ್ರಾಂಮನ್ನು ರೆಗ್ಯುಲರ್ ಆಗಿ ಪಿ.ಡಬ್ಲ್ಯೂ.ಡಿ ಗೆ ಪಹಿಸುತ್ತೀರಾ?

ಶ್ರೀ ಆರ್. ಗುಂಡೂರಾವ್ —ಐ.ಸಿ.ಆರ್.ಸಿ. ಕಾರ್ಯಕ್ರಮದಲ್ಲಿ ಪೂರ್ಣಗೊಳಿಸಿದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ಮೆಯಿಂಟೇನ್ ಮಾಡುತ್ತಾರೆ.

ಶ್ರೀ ಎಸ್. ಎಸ್. ಆರಕೇರಿ.—ಐ. ಸಿ. ಆರ್. ಸಿ. ಕಾರ್ಯಕ್ರಮದ ಮೇರೆಗೆ ಪೂರ್ಣಗೊಂಡ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರಿಗೆ ಕೊಡಬೇಕಾದುದು ನಿಜ. ಆದರೆ ಆ ರಸ್ತೆಯನ್ನು ಸರಿಯಾಗಿ ಮಾಡದೆ ಕಳೆದ ೫-೬ ವರ್ಷಗಳಿಂದ ಹಾಗೆ ಇದೆ. ಅದು ಬಹಳ ಮುಖ್ಯವಾದ ರಸ್ತೆ. ಆದ್ದರಿಂದ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಕೂಡಲೇ ಐ. ಸಿ. ಆರ್. ಸಿ. ಯಿಂದ ತೆಗೆದು ಲೋಕೋಪಯೋಗಿ ಇಲಾಖೆಯವರಿಗೆ ಹೊಸ ರಸ್ತೆ ಮಾಡುವುದಕ್ಕೆ ಕೊಡಲು ಒಪ್ಪುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅದನ್ನು ನಾನು ಎಕ್ಸಾಮಿನ್ ಮಾಡಿಸುತ್ತೇನೆ